(ಇಂದು ದಿನಾಂಕಃ 11-02-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**<u>ಪಾಟೀ ಸವಾಲುಃ ವಾದಿ ಪರಃ ಶ್ರೀ ಎಂ.ಬಿ.ಎನ್. ವಕೀಲರಿಂದಃ</u>**

ನಮ್ಮ ತಂದೆ-ತಾಯಿಗೆ ನಾವು 4 ಜನ ಮಕ್ಕಳು. 3 ನೇ ಪ್ರತಿವಾದಿ ನಮ್ಮ ಸಹೋದರ ಯಶವಂತ ಪಾವಸ್ಕರ್ ಇವರ ಹೆಂಡತಿ ಎಂದರೆ ಸರಿ. ವಾದಿ ನನ್ನ ಅಣ್ಣ ಎಂದರೆ ಸರಿ. ನಮ್ಮ ತಂದೆ ಮುಂಬೆ ಕಾರವಾರದಲ್ಲಿ ಪ್ರಸಿದ್ಧ ವಜ್ರ ಮತ್ತು ಬಂಗಾರದ ವ್ಯಾಪಾರಿ ಆಗಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಮ್ಮ ಮನೆತನ ಶ್ರೀಮಂತ ಕುಟುಂಬ ಆಗಿತ್ತು ಎಂದರೆ ಸರಿ. ನಾನು ನಮ್ಮ ತಂದೆ-

ತಾಯಿಗೆ ಒಬ್ಬಳೇ ಮಗಳಾಗಿದ್ದರಿಂದ ನನಗೆ ವಿಶೇಷವಾಗಿ ಪ್ರೀತಿ-ವಾತ್ಸಲ್ಯ ತೋರಿಸಿದ್ದಾರೆ ಎಂದರೆ ಸಾಕ್ಷಿ ಎಲ್ಲರಿಗೂ ತೋರಿಸಿದ್ದಾರೆ ಎಂದು ಹೇಳುತ್ತಾರೆ. ನಾನು ಬಿ.ಎ. ಪದವಿ ಓದಿದ್ದೇನೆ. ಆ ಸಮಯದಲ್ಲಿ ಎಲ್ಲಾ ಖರ್ಚು ವೆಚ್ಚಗಳನ್ನು ನಮ್ಮ ತಂದೆ-ತಾಯಿ ನೋಡಿಕೊಂಡಿದ್ದಾರೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಎಲ್ಲರದೂ ನೋಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನಾನು ಪ್ರಾಪ್ತ ವಯಸ್ಸಿಗೆ ಬಂದ ನಂತರ ನಮ್ಮ ತಂದೆ ವರನನ್ನು ನೋಡಿ ಮದುವೆ ಮಾಡಿದ್ದಾರೆ ಎಂದರೆ ಸರಿ. ನಮ್ಮ ತಂದೆ ಸುಸಂಸ್ಕೃತ ಮತ್ತು ಶ್ರೀಮಂತ ಕುಟುಂಬಕ್ಕೆ ನನ್ನನ್ನು ಕೊಟ್ಟು ಮದುವೆ ಮಾಡಿದ್ದಾರೆ ಎಂದರೆ ಸಾಕ್ಷಿ ತುಂಬಾ ಶ್ರೀಮಂತರು ಇಲ್ಲ ಎಂದು ಹೇಳುತ್ತಾರೆ. ನನ್ನ ಗಂಡ ಇಂಜನೀಯರ್ ಪದವೀಧರನಿದ್ದು ಇಂಜನೀಯರ್ ಆಗಿ ಉದ್ಯೋಗ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ಗಂಡನಿಗೆ ಒಳ್ಳೆಯ ಸಂಬಳ ಇದೆ ಎಂದರೆ ಸರಿ. ಮದುವೆ ಸಮಯದಲ್ಲಿ ನನ್ನ ತಂದೆ-ತಾಯಿ 250 ಗ್ರಾಮ್ ಬಂಗಾರ ಕೊಟ್ಟು ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಅಷ್ಟು ಕೊಟ್ಟಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಬ್ಬುವಾಡಾ ಗ್ರಾಮದಲ್ಲಿರುವ ನಮ್ಮ ಮನೆತನಕ್ಕೆ ಇರುವಂತಹ 10 ಗುಂಟೆ ಜಮೀನನ್ನು ನನ್ನ ಮದುವೆ ಕಾಲಕ್ಕೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನನ್ನು, ನನ್ನ ತಂದೆ-ತಾಯಿ ಮತ್ತು ಸಹೋದರರರು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನಮ್ಮ ತಾಯಿ ಕೆಲಸ ಮಾಡುತ್ತಿದ್ದುದರಿಂದ ಅವರಿಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸಾಕ್ಷಿ ನಮ್ಮ ತಂದೆಯೊಂದಿಗೆ ನಮ್ಮ ತಾಯಿ ಕೆಲಸ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನಮ್ಮ ತಾಯಿ ಕೇವಲ ಮನೆ ಕೆಲಸ ಮಾತ್ರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಮಧುಸೂಧನ ನನ್ನ ಸಹೋದರ. ನನ್ನ ಸಹೋದರ ಮಧುಸೂಧನ ಮೃತಪಟ್ಟಾಗ ನಾನು ಬೆಂಗಳೂರಿನಲ್ಲಿ ವಾಸವಾಗಿದ್ದೆ. ಯಾವ ಕಾರಣಕ್ಕಾಗಿ ನನ್ನ ಸಹೋದರ ಮೃತಪಟ್ಟಿದ್ದಾನೆ ಎಂದು ನನಗೆ ಗೊತ್ತಿಲ್ಲ. ಮದುವೆಯಾದ ನಂತರ ನಮ್ಮ ತಂದೆ-ತಾಯಿ ನಮಗೆ ಸಾಕಷ್ಟು ಹಣ ಕೊಡುತ್ತಿದ್ದುದರಿಂದ ಅವರಿಗೆ ವ್ಯಾಪಾರದಲ್ಲಿ ನಷ್ಟ ಆಗಿತ್ತು ಎಂದರೆ ಸರಿಯಲ್ಲ.

ಬೆಂಗಳೂರಿನಲ್ಲಿ ನಮಗೆ ಸೇರಿದ ಸ್ವಂತ ಮನೆ ಇದೆ ಎಂದರೆ ಸರಿ. ನಾನು ಬೆಂಗಳೂರಿನಲ್ಲಿ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಇಲ್ಲಿಯೂ ಮತ್ತು ಅಲ್ಲಿಯೂ ವಾಸವಾಗಿರುತ್ತೇನೆ ಎಂದು ಹೇಳುತ್ತಾರೆ. ದಾವಾ ಸ್ವತ್ತನ್ನು ಬಿಟ್ಟು ನಮ್ಮ ತಂದೆ-ತಾಯಿ ಮನೆತನಕ್ಕೆ ಬೇರೆ ಆಸ್ತಿ ಇಲ್ಲ. ದಾವಾ ಸ್ವತ್ತಿನಲ್ಲಿ ವಾದಿ, ಪ್ರತಿವಾದಿ ನಂ.1, ಪ್ರತಿವಾದಿ ನಂ.3 ವಾಸವಾಗಿದ್ದಾರೆ ಎಂದರೆ ಸಾಕ್ಷಿ 3 ನೇ ಪ್ರತಿವಾದಿ ನಾವು ಅನುಮತಿ ಕೊಟ್ಟಿದ್ದರಿಂದ ವಾಸವಾಗಿದ್ದಾರೆ ಎಂದು ಹೇಳುತ್ತಾರೆ. ವಾದಿ ಮತ್ತು ಪ್ರತಿವಾದಿಯರೆಲ್ಲರೂ ಹಬ್ಬ-ಹರಿದಿನಗಳನ್ನು ದಾವಾ ಸ್ವತ್ತಿನ ಮನೆಯಲ್ಲಿ ಆಚರಿಸುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆ ಎಷ್ಟಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಎಲ್ಲಾ ಮಕ್ಕಳಿಗೂ ಹಕ್ಕು ಇದೆ ಎಂದು ನಮ್ಮ ತಂದೆ ಮೃತ್ಯುಪತ್ರ ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಬದುಕಿದ್ದಾಗ ನನ್ನ ತಾಯಿ ಮತ್ತು ನನ್ನ ಹತ್ತಿರ ದಾವಾ ಸ್ವತ್ತು ಎಲ್ಲಾ ಮಕ್ಕಳಿಗೂ ಹೋಗಬೇಕು ಎಂದು ಹೇಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಗೆ ಈಗ 80 ವರ್ಷ ವಯಸ್ಸಾಗಿದೆ. ಈ ದಾವೆ ಹಾಕಿದಾಗ 1 ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ವಾಸವಾಗಿದ್ದು ನಂತರ ನಾನು 1 ನೇ ಪ್ರತಿವಾದಿಗೆ ಕರೆದುಕೊಂಡು ಹೋಗಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು 3 ನೇ ಪ್ರತಿವಾದಿಯ ಗಂಡ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಗಂಡನಿಗೆ ಕ್ಯಾನ್ಸರ್ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಎಷ್ಟು ದಿನ ಚಿಕಿತ್ಸೆ ತೆಗೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯ ಗಂಡ 5 ವರ್ಷದ ಹಿಂದೆ ಮೃತಪಟ್ಟಿದ್ದಾನೆ. ನನ್ನ ತಂದೆ-ತಾಯಿಗೆ ನಾನು ಒಬ್ಬಳೇ ಮಗಳಾಗಿದ್ದರಿಂದ ಅಪಾರ ಪ್ರೀತಿ ಇತ್ತು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಮಾತನ್ನು ಕೇಳುತ್ತಿದ್ದರು ಎಂದರೆ ಸರಿಯಲ್ಲ. ವಾದಿ, ಪ್ರತಿವಾದಿ ನಂ.1, 3 ರಿಂದ 5 ಇವರಿಗೆ ದಾವಾ ಸ್ವತ್ತನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಇಲ್ಲ ಅನ್ನುವುದು ಸರಿಯಲ್ಲ. 1 ನೇ ಪ್ರತಿವಾದಿಗೆ ಇಲ್ಲಸಲ್ಲದ್ದನ್ನು ಹೇಳಿ ದಾನಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಮುಂಚಿನಿಂದಲೂ ಹಣ ಮತ್ತು ಚಿನ್ನದ ಬಗ್ಗೆ

ನನಗೆ ಆಸೆ ಇತ್ತು ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರಿಗೂ ಸಹ ಸಮನಾದ ಹಕ್ಕು ಇದ್ದರೂ ಸಹ 1 ನೇ ಪ್ರತಿವಾದಿಯಿಂದ ನಾನು ಸುಳ್ಳು ದಾನಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವೆ ದಾಖಲಾದ ನಂತರದಿಂದ ನಾನು 1 ನೇ ಪ್ರತಿವಾದಿಯನ್ನು ದಾವಾ ಸ್ವತ್ತಿಗೆ ಕರೆದುಕೊಂಡು ಹೋಗಿಲ್ಲ ಅನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರಿದು 1 ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಇದ್ದು ನಿನ್ನೆ ಚಿಕಿತ್ಸೆಗಾಗಿ ಗೋವಾಕ್ಕೆ ಕಳುಹಿಸಿಕೊಟ್ಟಿದ್ದೇನೆ ಎಂದು ಹೇಳುತ್ತಾರೆ.

**ಪಾಟೀ ಸವಾಲು ಪ್ರತಿವಾದಿ ನಂ.3 ರಿಂದ 7 ರವರ ಪರ ಶ್ರೀಮತಿ ಎಸ್.ಜಿ.ಎನ್. ವಕೀಲರಿಂದಃ**

3 ನೇ ಪ್ರತಿವಾದಿ ನನ್ನ ಸಹೋದರನ ಹೆಂಡತಿ ಎಂದರೆ ಸರಿ. ನನ್ನ ಮತ್ತು 3 ನೇ ಪ್ರತಿವಾದಿಯ ಮದುವೆ 3-4 ದಿನಗಳ ಅಂತರದಲ್ಲಿ ನಡೆದಿತ್ತು ಎಂದರೆ ಸರಿ. 3 ನೇ ಪ್ರತಿವಾದಿಯ ಗಂಡ ಯಶವಂತ ಇವರಿಗೆ 12-13 ವಯಸ್ಸಿನಲ್ಲಿ ಇದ್ದಾಗ ಹೃದಯ ಶಸ್ತ್ರಚಿಕಿತ್ಸೆ ಆಗಿತ್ತು ಎಂದರೆ ಸರಿ. ಮತ್ತೆ 20 ವರ್ಷದ ನಂತರ ಮತ್ತೇ ಹೃದಯದ ಕಾಯಿಲೆ ಬಂದ ನಂತರ ಶಸ್ತ್ರ ಚಿಕಿತ್ಸೆ ಆಗಿತ್ತು ಎಂದರೆ ಸರಿ. ಹೃದಯ ಕಾಯಿಲೆಯ ಸಲುವಾಗಿ ಅವರು ಮಾಡುತ್ತಿದ್ದಂತಹ ಚಿನ್ನದ ವ್ಯಾಪಾರವನ್ನು ಕಡಿಮೆ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ಆದ್ದರಿಂದ ಪ್ರತಿವಾದಿ ನಂ.1, 4, 5 ಮತ್ತು ಮಾವನ ಜವಾಬ್ದಾರಿ 3 ನೇ ಪ್ರತಿವಾದಿಯ ಮೇಲೆ ಬಿದ್ದಿತ್ತು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಬಟ್ಟೆಯ ವ್ಯಾಪಾರ ಮತ್ತು ಬಟ್ಟೆ ಹೊಲಿಯುವ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಂದ ಆದಾಯದಲ್ಲಿ ಪ್ರತಿವಾದಿ ನಂ.1 ಮತ್ತು ಅವರ ಮಾವ ಮತ್ತು ಮನೆತನದ ಖರ್ಚು ವೆಚ್ಚವನ್ನು ನೋಡಿಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಗಂಡ ಮನೆಯ ಹಿರಿಯ ಮಗನಾಗಿದ್ದರಿಂದ ಮನೆಯಲ್ಲಿ ನಡೆಯುವ ಹಬ್ಬಗಳನ್ನು ಮತ್ತು ಸಮಾರಂಭಗಳನ್ನು 3 ನೇ ಪ್ರತಿವಾದಿಯ ಹಣದಿಂದ ನಡೆಸಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ದೈವಜ್ಞ ಕೋ-ಆಪರೇಟಿವ್ ಸೊಸೈಟಿಯಿಂದ ಸಾಲವನ್ನು ಪಡೆದುಕೊಂಡು ಅದನ್ನು ಅವರೇ ತೀರಿಸಿದ್ದಾರೆ ಎಂದರೆ ಸರಿಯಲ್ಲ. 2019 ರಲ್ಲಿ ನನ್ನ ತಾಯಿ ನನ್ನ ಹೆಸರಿನಲ್ಲಿ ಒಂದು ಮೃತ್ಯುಪತ್ರವನ್ನು ಬರೆದಿದ್ದರು ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ 3 ನೇ

ಪ್ರತಿವಾದಿಯ ಗಂಡನಿಗೆ ಹರಿನಿಯಾ ಶಸ್ತ್ರಚಿಕಿತ್ಸೆ ಆಗಿತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ 3 ನೇ ಪ್ರತಿವಾದಿಯ ಗಂಡನಿಗೆ ಕ್ಯಾನ್ಸರ್ ಆಗಿದ್ದರಿಂದ 6 ತಿಂಗಳು ಆಸ್ಪತ್ರೆಯಲ್ಲಿ ಇದ್ದು ಮೃತಪಟ್ಟಿದ್ದಾರೆ ಎಂದರೆ ಸರಿಯಲ್ಲ. 2020 ರಲ್ಲಿ ಮೃತಪಟ್ಟಿದ್ದಾರೆ ಎಂದರೆ ಸರಿ. ಆ ಸಮಯದಲ್ಲಿ ನಾನು ಅಂತ್ಯಕ್ರಿಯೆಗೆ ಹೋಗಿಲ್ಲ ಎಂದರೆ ಸಾಕ್ಷಿ ಕರೋನಾ ಇದ್ದುದರಿಂದ ನಾನು ಹೋಗಿರಲಿಲ್ಲ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿಯ ಗಂಡ ಮೃತಪಟ್ಟ ಸಮಯದಲ್ಲಿ 3 ನೇ ಪ್ರತಿವಾದಿಯ ತಂದೆ ಸಹ ಮೃತಪಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ವೇಳೆಯಲ್ಲಿ ನಾನು ದಾನಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. 2020 ರಲ್ಲಿ 1 ನೇ ಪ್ರತಿವಾದಿ 3 ನೇ ಪ್ರತಿವಾದಿಯೊಂದಿಗೆ ವಾಸವಾಗಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಅವರು ಪ್ರತ್ಯೇಕವಾಗಿ ಇದ್ದರು ಎಂದು ಹೇಳುತ್ತಾರೆ. ನಾನು ಬೆಂಗಳೂರಿನಿಂದ ಬಂದು ದಾನಪತ್ರ ಬರೆಸಿಕೊಂಡು ಹೋಗಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಗಂಡ ಮತ್ತು ಪ್ರತಿವಾದಿ ನಂ. 6 ಮತ್ತು 7 ರವರ ತಂದೆ ಮೃತಪಟ್ಟಾಗ ನಾನು ಯಾವುದೇ ಸಹಾಯ ಮಾಡಿಲ್ಲ ಅನ್ನುವುದು ಸರಿಯಲ್ಲ. ದಾವಾಸ್ವತ್ತನ್ನು ಬಿಟ್ಟು ಬೇರೆ ಆಸ್ತಿಗಳು ಇಲ್ಲ ಅನ್ನುವುದು ಗೊತ್ತಿದ್ದರೂ ಸಹ ಪ್ರತಿವಾದಿ ನಂ.3 ರಿಂದ 7 ರವರಿಗೆ ಯಾವುದೇ ಆಸ್ತಿ ಸಿಗಬಾರದು ಎಂಬ ಉದ್ದೇಶದಿಂದ ಸುಳ್ಳು ದಾನಪತ್ರ ಬರೆಸಿಕೊಂಡಿದ್ದೇನೆ ಅನ್ನುವುದು ಸರಿಯಲ್ಲ. ದಾವಾ ಆಸ್ತಿಯನ್ನು ಹೊಡೆದುಕೊಳ್ಳುವ ಉದ್ದೇಶದಿಂದ 1 ನೇ ಪ್ರತಿವಾದಿಯನ್ನು 3 ನೇ ಪ್ರತಿವಾದಿ ಚೆನ್ನಾಗಿ ನೋಡಿಕೊಂಡರೂ ಸಹ ವೈಷಮ್ಯ ಸಾಧಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿ ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಬಂದಾಗ 3 ನೇ ಪ್ರತಿವಾದಿ ಫೋನ್ ಮಾಡಿ ಕರೆದರೂ ಸಹ ನಾನು ಕರೆದುಕೊಂಡು ಹೋಗಿಲ್ಲ ಅನ್ನುವುದು ಸರಿಯಲ್ಲ. 3 ನೇ ಪ್ರತಿವಾದಿ ತನ್ನ ಮಗನ ಹೆಂಡತಿಯ ಸೀಮಂತ ಕಾರ್ಯಕ್ಕೆ ಕರೆಯಲು ನನಗೆ ಫೋನ್ ಮಾಡಿದಾಗ ನಾನು 1 ನೇ ಪ್ರತಿವಾದಿಗೆ ಅವರೊಂದಿಗೆ ಮಾತನಾಡಲು ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. 1 ನೇ ಪ್ರತಿವಾದಿಯ ಮನಸ್ಸು ಬದಲಾಯಿಸಿ ದಾನಪತ್ರವನ್ನು

ರದ್ದುಪಡಿಸಬಹುದು ಎಂಬ ಉದ್ದೇಶದಿಂದ ಅವರನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಇಟ್ಟುಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ನಮ್ಮ ತಂದೆ, ನಮ್ಮ ತಾಯಿಯ ಹೆಸರಿನಲ್ಲಿ ಕ್ರಯಕ್ಕೆ ತೆಗೆದುಕೊಂಡಿದ್ದರಿಂದ ದಾವಾ ಸ್ವತ್ತಿನಲ್ಲಿ ಎಲ್ಲರಿಗೂ ಹಕ್ಕು ಇದೆ ಅನ್ನುವುದು ಸರಿಯಲ್ಲ. 1 ನೇ ಪ್ರತಿವಾದಿಗೆ ವಯಸ್ಸಾಗಿದ್ದರಿಂದ ದಾವಾ ಸ್ವತ್ತಿನ ಮೇಲಿರುವ ವ್ಯಾಮೋಹದಿಂದ ನಾನು ಆರ್ಥಿಕವಾಗಿ ಸ್ಥಿತಿವಂತಳಾಗಿದ್ದರೂ ಸಹ ದಾನಪತ್ರವನ್ನು ಬರೆಸಿಕೊಂಡಿದ್ದೇನೆ ಅನ್ನುವುದು ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಕಾರವಾರ